ಸಿಸಿ ನಂಃ 187/2023

ಸಿ.ಡಬ್ಲೂ 11/

ಪಿ.ಡಬ್ಲೂ 9

## 4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಧಾರವಾಡ.

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಮಂಜುಳಾ |
| ಗಂಡನ ಹೆಸರು | ಃ | ಗೂಳಪ್ಪ ಹುಬ್ಬಳ್ಳಿ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸ ಸ್ಥಳ | ಃ | ಮರೇವಾಡ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **23.06.2025**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ಮೃತ ಗೂಳಪ್ಪ ನನ್ನ ಗಂಡ. 3 ವರುಷದ ಹಿಂದೆ ಚಾಸಾ8 ಮತ್ತು 9 ರವರು ಹಾಗೂ ನನ್ನ ಗಂಡ ಚಕ್ಕಡಿ ತೆಗೆದುಕೊಂಡು ಹೊಲಕ್ಕೆ ಹೊಗಿದ್ದರು . ರಾತ್ರಿ 9.50 ಕ್ಕೆ ಚಾಸಾ8 ರವರು ಫೊನ ಮಾಡಿ ಅಪಘಾತವಾಗಿ ನನ್ನ ಗಂಡ ಮರಣ ಹೊಂದಿದ್ದಾನೆ ಎಂದು ಹೇಳಿದ. ನಾನು ಚಾಸಾ1 ಸ್ಥಳಕ್ಕೆ ಹೊಗಿ ನೊಡಿದಾಗ ನನ್ನ ಗಂಡ ಮರಣ ಹೊಂದಿದ್ದರು ಚಾಸಾ8 ಮತ್ತು 9 ರವರಿಗೆ ಗಾಯಗಳಾಗಿದ್ದವು. ಚಾಸಾ8 ವತ್ತು 9 ರವರನ್ನು ವಿಚಾರಿಸಿದಾಗ ಮುಂದಿನನಿಂದ ಬುಲೇರೊ ವಾಹನ ಬಂದು ಅಪಘಾತ ಪಡಿಸಿದೆ ಎಂದು ಹೇಳಿರುತಾತರೆ. ನಾನು ಸ್ಥಳಕ್ಕೆ ಹೊದಾಗ ಸದರಿ ವಾಹನ ಹಾಗು ಚಾಲಕ ಇರಲಿಲ್ಲ. ಇದಾಗಿ 10 ದಿನಗಳ ನಂತರ

ಸಿಸಿ ನಂಃ 187/2023
ಸಿ.ಡಬ್ಲೂ 11/
ಪಿ.ಡಬ್ಲೂ 9

ಪೋಲಿಸರು ಠಾಣೆ ಗೆ ಕರೆಸಿದ್ದು ಅಲ್ಲಿ ಅಪಘಾತ ಪಡಿಸಿದ ವಾಹನದ ಬಗ್ಗೆ ಗೊತ್ತಾಯಿತು. ಸದರಿ ವಾಹನದ ನಂಬರ ನನಗೆ ಗೊತ್ತಿಲ್ಲ. ಸದರಿ ಚಾಲಕನ ಹಸೆರು ಗೊತ್ತಿಲ್ಲ ಅ ದಿನ ಠಾಣೆ ಯಲ್ಲಿ ಇದ್ದ. ಆರೋಪಿಯನ್ನು ನೊಡಿದರೇ ಗುರುತಿಸಿರುತ್ತೇನೆ. ಸಾಕ್ಷಿ ಆರೋಪಿ ಪೊಟೊ ನೊಡಿ ಗುರುತಿಸಿರುತ್ತಾರೆ. ಸಾಕ್ಷಿ ನಿಪಿ.8 ರಿಂದ 12 ಪೊಟೊಗಳನ್ನು ನೊಡಿ ಗುರುತಿಸಿರುತ್ತಾರೆ. ಸದರಿ ಅಪಘಾತ ವು ಬುಲೇರೊ ವಾಹನದ ಚಾಲಕನ ತಪ್ಪಿನಿಂದ ಆಗಿದೆ ಎಂದು ಚಾಸಾ8 ಮತ್ತು 9 ರವರ ಹೇಳಿರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ**

1. ಅಪಘಾತ ನಡೆದ ದಿನ ಹೆಳಲು ಬರುವುದಿಲ್ಲ. ಅಪಘಾತವಾದಾಗ ನಾನು ಮನೆಯಲ್ಲಿ ಇದ್ದೆ. ಅಪಘಾತವನ್ನು ನಾನು ಕಣ್ಣಾರೆ ನೊಡಿಲ್ಲ ಎಂದರೆ ಸರಿ. ಚಾಸಾ8 ರವರು ಹೇಳಿದ್ದರಿಂದ ಅಪಘಾತದ ಬಗ್ಗೆ ಗೊತ್ತಾಯಿತು ಎಂದರೆ ಸರಿ. ನಿಪಿ.8 ರಿಂದ 12 ಪೋಲಿಸರು ಠಾಣೆ ಯಲ್ಲಿ ತೊರಿಸಿದ್ದರಿಂದ ಅ ವಾಹನದ ಬಗೆಗ ಗೊತ್ತಾಯಿತು ಎಂದರೆ ಸರಿ. ಹಾಗೂ ನನಗೆ ವೈಯಕ್ತಿಕವಾಗಿ ವಾಹನದ ಬಗ್ಗೆ ಗೊತ್ತಿಲ್ಲ ಎಂದರೆ ಸರಿ. ಅಪಘಾತವಾದಾಕ್ಕೆ ಸಂಬಂದಪಟಟಂತೆ ನಾವು ಪರಿಹಾರ ಪಇಡೆದಿದ್ದೆವೆ ಎಂದರೆ ಸರಿ. ಆರೋಪಿಗೂ ಹಾಗೂ ಅಪಘಾತಕ್ಕೂ ಯಾವದೇ ಸಂಬಂದ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಿಸಿ ನಂಃ 187/2023
ಸಿ.ಡಬ್ಲೂ 11/
ಪಿ.ಡಬ್ಲೂ 9

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,
ಧಾರವಾಡ.